# ಯುದ್ಧಭೂಮಿಯಲ್ಲಿ ಮಿನುಗಿದ ತಾರೆ

■ ಪ್ರವೀಣ ಕುಲಕರ್ಣಿ



ಅಧಿಕಾರದ ಚುಕ್ಕಾಣಿ ಹಿಡಿದ ಜಗತ್ತಿನ ಹಲವು ನೇತಾರರು 'ರಾಜನೀತಿತಜ್ಞ'ರಂತೆ ನಟಿಸಿ ಕೊನೆಗೆ ಸೆಲೆಬ್ರಿಟಿ ಪಟ್ಟಕ್ಕೇರಿದ ಉದಾಹರಣೆಗಳು ನಮ್ಮ ನಡುವೆ ಬೇಕಾದಷ್ಟಿವೆ. ಆದರೆ, ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ತಮ್ಮ ನಟನೆಯಿಂದ ಮೊದಲು ಸೆಲೆಬ್ರಿಟಿಯಾಗಿ ಬಳಿಕ ಅಧ್ಯಕ್ಷ ಹುದ್ದೆಗೇರಿದವರು. ಹಾಗೆ ರಾಷ್ಟ್ರದ ಅಧಿಕಾರದ ಚುಕ್ಕಾಣಿ ಹಿಡಿದ ಮೇಲೆ ನೈಜ ರಾಜನೀತಿತಜ್ಞರಾಗಿ ಸಹ ಕಂಗೊಳಿಸುತ್ತಿರುವವರು. ರಾಜಕೀಯದ ಹಿನ್ನೆಲೆ ಇಲ್ಲದಿದ್ದರೂ ಜಗತ್ತಿನ ರಾಜಕೀಯ ನಾಯಕರ ಮಧ್ಯೆ ನಕ್ಷತ್ರದಂತೆ ಮಿನುಗುತ್ತಿರುವವರು. ಅವರ ಆ ಹೊಳಪಿನ ವ್ಯಕ್ತಿತ್ವಕ್ಕೆ ಈಗ 'ಟೈಮ್ಸ್ ವರ್ಷದ ವ್ಯಕ್ತಿ' ಗೌರವದ ಚಿನ್ನದ ಲೇಪನ ಬೇರೆ!

ಕಾಲು ಕೆದರಿ ಜಗಳ ತೆಗೆದ ರಷ್ಯಾ, ತಮ್ಮ ದೇಶದ ವಿರುದ್ಧ ಪೂರ್ಣಪ್ರಮಾಣದ ಯುದ್ಧವನ್ನು ಸಾರಿದ ಮೇಲೆ ಯುದ್ಧಭೂಮಿಯ ಮುಂಚೂಣಿಯಲ್ಲಿ ನಿಂತುಕೊಂಡು ಸೈನಿಕರನ್ನು ಹುರಿದುಂಬಿಸುತ್ತಿರುವ ಝೆಲೆನ್‌ಸ್ಕಿ, ದೈತ್ಯಶಕ್ತಿಯ ವಿರುದ್ಧ ತಮ್ಮ ದೇಶ ತಲೆ ಎತ್ತಿ ನಿಲ್ಲುವಂತೆ ಮಾಡಿದವರು. ರಷ್ಯನ್ ನಾಯಕರ ಅಟ್ಟಹಾಸದ ಮಾತುಗಳಿಗೆ ತಕ್ಕ ಪ್ರತ್ಯುತ್ತರ ನೀಡುತ್ತಾ, ವಿರೋಧಿಗಳು ನಾಲಗೆಯನ್ನು ಹರಿಬಿಟ್ಟಾಗ, ಅಂತಹ ಮಾತುಗಳನ್ನು ಅಲಕ್ಷಿಸಿ ಘನತೆಯಿಂದ ನಡೆದುಕೊಳ್ಳುವ ಈ ಅಧ್ಯಕ್ಷ, ಉಕ್ರೇನ್‌ನ ಜನಸಮುದಾಯದ ಪ್ರೀತಿಗೆ ಪಾತ್ರರಾದವರು.

ಯುದ್ಧಭೂಮಿಯ ಪ್ರತಿಯೊಂದು ಆಗುಹೋಗನ್ನೂ ಪ್ರಜೆಗಳಿಗೆ ತಿಳಿಸುತ್ತಾ, ಯುದ್ಧದಿಂದ ಅನುಭವಿಸಬೇಕಾದ ತೊಂದರೆಗಳಿಗೆ ಅವರನ್ನು ಸಜ್ಜುಗೊಳಿಸುತ್ತಾ ಗಾಯಗೊಂಡ ಸೈನಿಕರನ್ನು ಭೇಟಿಯಾಗಿ ಸಾಂತ್ವನ ಹೇಳುತ್ತಾ ರೈಲಿನಲ್ಲಿ ದೇಶದ ಉದ್ದಗಲಕ್ಕೂ ಸಂಚರಿಸುತ್ತಿರುವ ಝೆಲೆನ್‌ಸ್ಕಿ, ಜಗತ್ತು ಕಂಡ ಅಪರೂಪದ ಧೀಮಂತ ನಾಯಕ. 'ನಾನು, ನನ್ನ ಪ್ರಜೆಗಳ ಮಧ್ಯದಲ್ಲೇ ಇರುವೆ. ಇದ್ದರೂ ಸತ್ತರೂ ಅವರಲ್ಲಿ ಒಂದಾಗಿ ಉಳಿಯುವೆ' ಎಂಬ ಅವರ ಮಾತು, ಅಧ್ಯಕ್ಷರೊಂದಿಗೆ ಜನರ ಬಾಂಧವ್ಯವನ್ನು ಬಲವಾಗಿ ಬೆಸೆದುಬಿಟ್ಟಿದೆ.

ಉಕ್ರೇನ್‌ನ ಅಧ್ಯಕ್ಷರಾಗಿ ಚುನಾಯಿತರಾಗುವ ಮುನ್ನ ಝೆಲೆನ್‌ಸ್ಕಿ ಕಾಮೆಡಿಯನ್ ಆಗಿದ್ದವರು. 'ಸರ್ವಂಟ್ ಆಫ್ ದಿ ಪೀಪಲ್' ಎಂಬ ಟಿ.ವಿ ಷೋದಲ್ಲಿ ಅಧ್ಯಕ್ಷ ಹುದ್ದೆಗೇರಿದ ಶಿಕ್ಷಕನ ಪಾತ್ರವನ್ನೂ ಅವರು ಮಾಡಿದ್ದರು. ಆ ಷೋ ಉಕ್ರೇನ್‌ನ ಜನಸಾಮಾನ್ಯರನ್ನು ಸೂಜಿಗಲ್ಲಿನಂತೆ ಸೆಳೆದುಬಿಟ್ಟಿತ್ತು. 2019ರಲ್ಲಿ ನಡೆದ ಅಧ್ಯಕ್ಷ ಚುನಾವಣೆಯಲ್ಲಿ ಅವರು ಸ್ಪರ್ಧಿಸಿ ಗೆಲ್ಲುವಂತಾಗಲು ಈ ಷೋ ಅತ್ಯಂತ ಪ್ರಮುಖವಾದ ಪಾತ್ರ ವಹಿಸಿತ್ತು. ಉಕ್ರೇನ್‌ನ ಕ್ರಿವೊಯ್ ರೋಗ್ ಎಂಬ ಕಲುಷಿತ ನಗರದಲ್ಲಿ ಹುಟ್ಟಿ, ಬೆಳೆದ ಝೆಲೆನ್‌ಸ್ಕಿ ಒಬ್ಬ ಯಹೂದಿ. ಅವರ ಮನೆಯ ಭಾಷೆ ರಷ್ಯನ್. 44ರ ಹರೆಯದ ಝೆಲೆನ್‌ಸ್ಕಿ ನಾಲ್ಕು ವರ್ಷಗಳ ಹಿಂದಿನವರೆಗೆ ರಾಜಕೀಯದ ಕುರಿತೇನೂ ಚಿಂತಿಸಿದವರಲ್ಲ. ಆದರೆ, ಉಕ್ರೇನ್‌ನ ಆಡಳಿತದ ಚುಕ್ಕಾಣಿ ಹಿಡಿದ ಮೇಲೆ ಆ ದೇಶ ಕಂಡ ಸಾರ್ವಕಾಲಿಕ ಶ್ರೇಷ್ಠ ಅಧ್ಯಕ್ಷ ಎಂಬ ಹಿರಿಮೆಗೆ ಪಾತ್ರರಾಗುವ ಮಟ್ಟಕ್ಕೆ ನಾಯಕತ್ವ ಗುಣವನ್ನು ಬೆಳೆಸಿಕೊಂಡವರು.

ಅಧ್ಯಕ್ಷ ಸ್ಥಾನದ ಚುನಾವಣೆಗೆ ಸ್ಪರ್ಧಿಸಿದ ಮೇಲೆ ಝೆಲೆನ್‌ಸ್ಕಿ ಅವರು ಜನತೆಗೆ ಕೊಟ್ಟಿದ್ದು ಎರಡೇ ಎರಡು ಮಹತ್ವದ ಭರವಸೆಗಳನ್ನು. ಒಂದು, ಭ್ರಷ್ಟಾಚಾರವನ್ನು ಬೇರುಸಹಿತ ಕಿತ್ತುಹಾಕುವೆ ಎನ್ನುವುದಾದರೆ ಮತ್ತೊಂದು, ರಷ್ಯಾದೊಂದಿಗಿನ ಸಂಘರ್ಷವನ್ನು ಕೊನೆಗಾಣಿಸುವೆ ಎಂಬುದು. ಅಧಿಕಾರಕ್ಕೆ ಬಂದ ಮೇಲೆ ವಿಐಪಿ ಸಂಸ್ಕೃತಿಯನ್ನು ತೆಗೆದುಹಾಕಿದ ಅವರು, ಕಚೇರಿಗಳಲ್ಲಿ ಇನ್ನುಮುಂದೆ ಅಧ್ಯಕ್ಷರ ಭಾವಚಿತ್ರ ಹಾಕುವಂತಿಲ್ಲ ಎಂದು ಸುತ್ತೋಲೆ ಹೊರಡಿಸಿದರು. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದರು.

ರಷ್ಯಾದೊಂದಿಗೆ ಮಾತುಕತೆ ಹಾದಿಯನ್ನು ಸುಗಮಗೊಳಿಸಿದರು. ಆದರೆ, ರಷ್ಯಾ ದೇಶವು ಉಕ್ರೇನ್ ಮೇಲೆ ದಬ್ಬಾಳಿಕೆ ನಡೆಸಿ, ಸಂಪೂರ್ಣ ನಿಯಂತ್ರಣ ಸಾಧಿಸಲು ಹೊರಟಿರುವುದು ಖಚಿತವಾಗುತ್ತಿದ್ದಂತೆ ಅದರ ವಿರುದ್ಧ ಎದೆಸೆಟೆಸಿ ನಿಂತರು. ಪಶ್ಚಿಮ ದೇಶಗಳ ನೆರವನ್ನೂ ಬಯಸಿದರು. ರಷ್ಯಾ ಯುದ್ಧ ಸಾರಿದ ಬಳಿಕ ದೇಶ ಬಿಟ್ಟು ಎಲ್ಲಿಗೂ ಓಡಿಹೋಗದ ಈ ನಾಯಕ, ರಾಜಧಾನಿ ಕೀವ್‌ನಲ್ಲೇ ಉಳಿದು ಸೈನ್ಯಕ್ಕೆ ಶಕ್ತಿ ತುಂಬತೊಡಗಿದರು. ರಷ್ಯನ್ ಬೇಹುಗಾರರು, ಸೈನಿಕರು ತಮ್ಮನ್ನು ಕೊಲ್ಲುವ ಭಯವಿದ್ದರೂ ಅದಕ್ಕೆ ಎದೆಗುಂದಲಿಲ್ಲ. ಮನೆ ಕಳೆದುಕೊಂಡು, ಪ್ರೀತಿ ಪಾತ್ರರನ್ನು ಕಳೆದುಕೊಂಡು ಬೀದಿಗೆ ಬಿದ್ದ ಸಾವಿರಾರು ಪ್ರಜೆಗಳನ್ನು ಖುದ್ದು ಭೇಟಿಮಾಡಿ ಕಣ್ಣೀರು ಒರೆಸಿದರು. ಗಾಯಾಳುಗಳ ಚಿಕಿತ್ಸೆಗೆ ತಾವೇ ಮುಂದೆ ನಿಂತು ತುರ್ತು ವ್ಯವಸ್ಥೆ ಮಾಡಿದರು. ಶಾಂತಿಯನ್ನು ಬಯಸುತ್ತಲೇ ದೇಶದ ಸ್ವಾಭಿಮಾನಕ್ಕೆ ಧಕ್ಕೆ ಬರದಂತೆ ನಡೆದುಕೊಂಡರು. ರಷ್ಯನ್ ದೈತ್ಯರು ಹಲವು ತಿಂಗಳವರೆಗೆ ಯುದ್ಧ ನಡೆಸಿದರೂ ಬಂಡೆಗಲ್ಲಿನಂತೆ ನಿಂತು ಅವರನ್ನು ಹಿಮ್ಮೆಟ್ಟಿಸಲು ಕಾರಣರಾದರು.

ಯುದ್ಧ ಇನ್ನೂ ಮುಗಿದಿಲ್ಲ. ಆದರೆ, ಉಕ್ರೇನ್ ಜನ ಯುದ್ಧದ ಕ್ಷೋಭೆ ನಡುವೆಯೂ ತಾಳ್ಮೆಗೆಡದೆ ಹೊಸ ಭವಿಷ್ಯದತ್ತ ಆತ್ಮ ವಿಶ್ವಾಸದಿಂದ ಎದುರು ನೋಡುತ್ತಿದ್ದಾರೆ. ಝೆಲೆನ್‌ಸ್ಕಿ ರೂಪದಲ್ಲಿ ಅಸಾಮಾನ್ಯ ನಾಯಕ ಅವರಿಗೆ ದಕ್ಕಿರುವುದೇ ಅವರ ಭರವಸೆಗೆ ಶಕ್ತಿ ತುಂಬಿದಂತಾಗಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65